ಶ್ರೀ ಎಂ. ವೈ. ಘೋರ್ಪಡೆ:— ಅದು ಬೇರೆ ಬೇರೆ ಕಡೆ, ಬೇರೆ ಬೇರೆ ರೀತಿಯಲ್ಲಿದೆ. ಕೆಲವು ಕಡೆ ಜಿಲ್ಲಾಪರಿಷತ್ತಿನ ಕಂಟ್ರೋಲ್‌ನಲ್ಲಿರುತ್ತಾರೆ, ಕೆಲವು ಕಡೆ ಮಂಡಲ್ ಪಂಚಾಯ್ತಿ ಕಂಟ್ರೋಲ್‌ನಲ್ಲಿದ್ದಾರೆ. ಆದರೆ ತಾಲ್ಲೂಕು ಮಟ್ಟದಲ್ಲಿ ಫಿಜಿಕಲ್ ಆಗಿ ಇರುತ್ತಾರೆ. ಯಾರ ಕಂಟ್ರೋಲ್‌ನಲ್ಲಿದ್ದರೂ ಕೂಡ ಅವರು ಪ್ಲಾನ್ ಪ್ರೊಗ್ರಾಮ್ ಕಾರ್ಯಕ್ರಮ ಹಾಕಿಕೊಳ್ಳಲಿಕ್ಕೆ ಏನೂ ತೊಂದರೆ ಇಲ್ಲ. ಎಲ್ಲಿ ಈ ರೀತಿಯ ತೊಂದರೆ ಇದೆಯೋ ಅಲ್ಲಿ ಸರ್ಕಾರವೇ ನೇರವಾಗಿ ಕಂಟಾಕ್ಟ ಮಾಡಿ ಆಯಾ ಪ್ರದೇಶದಲ್ಲಿ ರಿಪೇರಿ ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇವತ್ತು ಜಿಲ್ಲಾಪರಿಷತ್ತಿನಲ್ಲಿ ಒಬ್ಬ ಎಂಜಿನಿಯರ್ ಇರುತ್ತಾರೆ. ಅವರೇ ರಸ್ತೆ ನೋಡಿಕೊಳ್ಳಬೇಕು. ಕೊಳವೆ ಬಾವಿ ನೋಡಿಕೊಳ್ಳಬೇಕು. ಸಕಲ ಕೆಲಸ ನೋಡುವ ಸಕಲ ಸಾರ್ವಭೌಮ ಆತ. ಆದ್ದರಿಂದ ಕುಡಿಯುವ ನೀರಿನ ಬಗ್ಗೆಯೇ ಪ್ರತ್ಯೇಕ ಅಧಿಕಾರಿಯನ್ನು ಇಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ನಾವು ಏನು ಮಾಡಿದ್ದೇವೆ ಅದಕ್ಕಿಂತ ಹೆಚ್ಚು ಏನು ಮಾಡ ಬೇಕಾದರೂ ಸರ್ಕಾರ ಅದನ್ನು ಖಂಡಿತವಾಗಿ ಗಮನಿಸುತ್ತದೆ.

ಶ್ರೀ ಎನ್. ಚಿಕ್ಕೇಗೌಡ.—ಕೆಲವನ್ನು ತಾಲ್ಲೂಕು ಮಟ್ಟದಲ್ಲಿ ಕೆಲವನ್ನು ಮಂಡಲ ಪಂಚಾಯಿತಿ ಮಟ್ಟದಲ್ಲಿ ನೋಡಿಕೊಳ್ಳುವುದರಿಂದ ಇವೊತ್ತು ಈ ಸಮಸ್ಯೆ ದ್ವಂಧ್ವವಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲಾಪರಿಷತ್ತಿನಲ್ಲಿ ಈ ಬಗ್ಗೆ ನಾವು ಪ್ರಸ್ತಾಪ ಕೂಡ ಮಾಡಿದ್ದೇವೆ. ಕೆಲವು ಕಡೆ ಮಂಡಲ ಪಂಚಾಯಿತಿ ಮಟ್ಟದಲ್ಲಿ ಕೊಟ್ಟಿದ್ದೇವೆಂದು ಹೇಳುತ್ತೀರಿ. ಇವತ್ತು ಮಂಡಲಗಳಲ್ಲಿ ಹಣ ಇಲ್ಲ, ವಾಹನ ಇಲ್ಲ. ಇವತ್ತು ಜಿಲ್ಲಾ ಪರಿಷತ್ತಿನಲ್ಲಿ ಬೋರ್ ವೆಲ್‌ನ ೧೫-೨೦ ಅಡಿ ಉದ್ದದ ಪೈಪ್‌ಗಳನ್ನು ಜೀಪ್‌ನಲ್ಲಿ ಹಾಕಿಕೊಂಡು ಹೋಗುವುದಕ್ಕಾಗುವುದಿಲ್ಲ. ಅಲ್ಲಿಗೆ ನೀವು ವ್ಯಾನ್ ಕೊಡ ಬೇಕಾಗುತ್ತದೆ. ಇವತ್ತು ಅಲ್ಲಿಗೆ ಕೊಟ್ಟಿರುವ ವಾಹನಗಳು ಕೆಟ್ಟು ನಿಂತಿವೆ. ಇವತ್ತು ಪ್ರತಿಯೊಂದು ಊರಿನಲ್ಲೂ ಓಪನ್‌ವೆಲ್‌ಗಳು ಬತ್ತಿದ್ದು ಎಲ್ಲರೂ ಬೋರ್ ವೆಲ್‌ಗಳನ್ನೇ ನಂಬಿಕೊಳ್ಳಬೇಕಾಗಿದೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಬಗ್ಗೆ ಪ್ರಥಮ ಗಮನ ಕೊಡದಿದ್ದರೆ ಹೇಗೆ ? ಇವತ್ತು ಜೀಪ್ ಕೊಟ್ಟರೆ ಅಲ್ಲಾಗಳಲ್ಲಿ ಪೈಪ್ ಸಾಗಿಸಲು ಕಷ್ಟವಾಗುತ್ತದೆ. ಮಾನ್ಯ ಮಂತ್ರಿಗಳಿಗೆ ಸಂದೂರಿನಲ್ಲಿ ಈ ಅನುಭವ ಇಲ್ಲದಿರುವುದರಿಂದ ಅವರಿಗೆ ಕಷ್ಟ ಗೊತ್ತಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸದಸ್ಯರು ನನಗೆ ಇದರಲ್ಲಿ ಏನೂ ಅನುಭವ ಇಲ್ಲ ಎಂದು ಹೇಳಿದರು. ಇದರ ಬಗ್ಗೆ ನನಗೆ ಇರುವಷ್ಟು ಅನುಭವ ಬೇರೆ ಯಾವ ವಿಷಯದಲ್ಲೂ ಇಲ್ಲ. ಸಂಡೂರಿನಲ್ಲಿ ಇದನ್ನು ನಾನು ಬೇಕಾದಷ್ಟು ಅನುಭವಿಸಿದ್ದೇನೆ. ಅಲ್ಲಿನ ಬೋರ್‌ವೆಲ್‌ಗಳನ್ನು ಯಾರೂ ರಿಪೇರಿ ಮಾಡುವುದಕ್ಕೆ ಇಲ್ಲದ ಪರಿಸ್ಥಿತಿಯನ್ನೂ ನಾವು ಎದುರಿಸಿದ್ದೇವೆ. ಈಗ ಒಂದು ಜೀಪನ್ನು ಇಟ್ಟಿದ್ದೇವೆ. ಈ ವ್ಯವಸ್ಥೆ ಬಗ್ಗೆ ಎಲ್ಲಾ ರೀತಿಯ ಅಭಿಪ್ರಾಯಗಳೂ ಬರುತ್ತಿವೆ. ಕೆಲವರು ಇದು ಮಂಡಲ ಪಂಚಾಯಿತಿಯಲ್ಲೇ ಇರಲಿ ಎಂದು ಹೇಳಿದ್ದೂ ಉಂಟು. ಇನ್ನೂ ಕೆಲವರು ತಾಲ್ಲೂಕು ಮಟ್ಟದಲ್ಲಿ ಇದ್ದರೆ ವಾಸಿ ಎಂದು ಹೇಳುತ್ತಿದ್ದಾರೆ. ನನ್ನ ವೈಯಕ್ತಿಕ ಅಭಿಪ್ರಾಯ ಎಂದರೆ ತಾಲ್ಲೂಕು ಮಟ್ಟದಲ್ಲಿ ನಾವು ವ್ಯವಸ್ಥೆ ಮಾಡಬೇಕಾಗುತ್ತದೆ. ಹಾಗೆ ಮಾಡಿದರೆ ಆಗ ಮಂಡಲಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಈ ಬಗ್ಗೆ ನಾವು ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಇದು ಜಿಲ್ಲಾ ಮತ್ತು ವಿಭಾಗೀಯ ಮಟ್ಟದಲ್ಲಿ ಚರ್ಚೆಯಾಗ ಬೇಕೆಂದು ಹೇಳಿದ್ದೇವೆ. ಆ ಚರ್ಚೆಯ ಎಲ್ಲರ ಒಟ್ಟಾಭಿಪ್ರಾಯ ತಿಳಿದುಕೊಂಡು ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ ತಾಲ್ಲೂಕು ಮಟ್ಟದಲ್ಲಿ ಇದು ನಡೆಯಬೇಕಾಗುತ್ತದೆ.

ಜಿಲ್ಲಾ ಪರಿಷತ್ತು ಕಾಯ್ದೆಗೆ ತಿದ್ದುಪಡಿ

1081. SRI K. B. KOLIWAD (Ranibennur).—Will the Minister for Rural Development Panhachyat Raj, Information and Publicity be pleased to state.—

a) Whether there is any proposal before the Government to amend the Zilla Parishad Taluk Panchayat and Mandal Panchayat Act to reduce from 2/3 Majority to bring no confidence motion against Zilla Parishad Adhyaksha and Up-adhyaksha ?

SRI M. Y. GHORPADE (Minister for Rural Development and Panchayatraja, Information and Publicity).—

a) Government is examining this matter.

ಶ್ರೀ ಕೆ. ಬಿ, ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ಕಳೆದ ವಿಧಾನಸಭೆ ಚುನಾವಣೆ ಆದನಂತರ ಕೆಲವು ಜಿಲ್ಲಾ ಪರಿಷತ್ತುಗಳು ತಮ್ಮ ಬಹುಮತವನ್ನು ಕಳೆದುಕೊಂಡಿವೆ. ಇದರಿಂದ ಜಿಲ್ಲಾ ಪರಿಷತ್ತುಗಳು ವ್ಯವಹಾರ ನಡೆಸುವುದು ಬಹಳ ಕಷ್ಟವಾಗಿದೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಹಾಗೆ ಬದಲಾವಣೆ ತರಲು ಸರ್ಕಾರ ಈ ಬಗ್ಗೆ ಪಾಸಿಟೀವ್ ಆಗಿ ಯೋಚನೆ ಮಾಡುತ್ತಿದೆಯೋ ಅಥವಾ ನೆಗಿಟೀವ್ ಆಗಿ ವಿಚಾರ ಮಾಡುತ್ತಿದೆಯೋ ? ಇಪ್ಪತ್ತು ಎಷ್ಟು ಜಿಲ್ಲಾ ಪರಿಷತ್ತುಗಳು ವಿಧಾನಸಭೆಯ ಚುನಾವಣೆ ಆದಮೇಲೆ ತಮ್ಮ ಬಹುಮತವನ್ನು ಕಳೆದುಕೊಂಡಿವೆ ? ಬಹುಮತ ಇಲ್ಲದೇ ಇದ್ದರೂ ಅಲ್ಲಿ ಆಡಳಿತ ನಡೆಯುತ್ತ ಇದೆ ಎಂದರೆ ಇದು ಪ್ರಜಾಪ್ರಭುತ್ವದ ಮೂಲ ತತ್ವಕ್ಕೆ ವಿರೋಧವಾಗುವುದಿಲ್ಲವೇ ?

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದ ವಿಚಾರ. ಇದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿ ಇದೆ. ಮತ್ತೆ ಇದರ ಬಗ್ಗೆ ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡುವಾಗ ಸ್ಪಷ್ಟ ವಿವರಗಳನ್ನು ಕೊಟ್ಟಿದ್ದೇನೆ. ಅಧ್ಯಕ್ಷರು ಮೆಜಾರಿಟಿಯನ್ನು ಕಳೆದು ಕೊಂಡರೆ ಆಡಳಿತಕ್ಕೆ ಎಷ್ಟು ತೊಂದರೆಯಾಗುತ್ತದೆಂಬುದು ಎಲ್ಲರಿಗೂ ಗೊತ್ತಿದೆ. ಈಗ ಕೋಲಾರ ತುಮಕೂರು, ಗುಲ್ಬರ್ಗ, ಬೀದರ್‌ನಲ್ಲಿ ಈ ಪರಿಸ್ಥಿತಿ ಉಂಟಾಗಿದೆ. ಇಂತಹ ಸಮಯದಲ್ಲಿ ಅಧ್ಯಕ್ಷರ ಮಾತನ್ನು ಕೇಳಬೇಕೋ ಅಥವಾ ಬಹುಮತ ಇರುವವರ ಮಾತನ್ನು ಕೇಳಬೇಕೋ ಎಂದು ಅಲ್ಲಿನ ಮುಖ್ಯ ಕಾರ್ಯದರ್ಶಿಗಳೂ ಕೂಡಾ ಗೊಂದಲಕ್ಕೆ ಬೀಳುತ್ತಾರೆ, ಇದರಿಂದ ಅಲ್ಲಿನ ಅಭಿವೃದ್ಧಿ, ಕಾರ್ಯಕ್ರಮಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಈ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೇವಲ ನಾಲ್ಕು ಜಿಲ್ಲೆಗಳಲ್ಲಿ ಮೆಜಾರಿಟಿ ಇಲ್ಲವೆಂದು ಹೇಳಿದ್ದಾರೆ. ಧಾರವಾಡ ಜಿಲ್ಲೆಯೂ ಸಹ ಜಿಲ್ಲಾ ಪರಿಷತ್ತು ಮೈನಾರಿಟಿಗೆ ಬಂದಿದೆ. ೧೧ ಜಿಲ್ಲೆಗಳಲ್ಲಿ ಜಿಲ್ಲಾಪರಿಷತ್ತಿನ ಆಡಳಿತ ಜನತಾ ದಳದಿಂದ ಕೈಬಿಡುವ ಸ್ಥಿತಿಯಲ್ಲಿದೆಯೆಂದು ನಾನು ಕೇಳಿದ್ದೇನೆ. ಮಾನ್ಯ ಮಂತ್ರಿಗಳಂ ಸರಿಯಾದ ಮಾಹಿತಿಯನ್ನು ಒದಗಿಸಬೇಕೆಂದು ಕೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಯಾವ ಜಿಲ್ಲೆಯಲ್ಲಿ ಮೆಜಾರಿಟಿ ಮೈನಾರಿಟಿ ಆಗಿ ಇದ್ದರೆ ಆದಕ್ಕೆ ಅನ್ವಯಿಸುತ್ತದೆ.

SRI K. LAKKAPPA.—There are certain Zilla Parishads where there is no actual majority. 2/3rd majority is required for removing that Body. Certain Zilla Parishads are not functioning in accordance with law. There are lot of irregularities in certain Zilla Parishads. In such cases, the Govt. can take over or supersede or dismiss them. There is provision under the Zilla Parishads Act. Such an action has not been initiated in spite of representations made to the Government, for example, Tumkur and other number of Zilla Parishads. Why action has not been taken ? The Zilla Parishads have to function within the parameters of the Z.P. Act. It has come to the notice that no budgets have been prepared, no works have been taken up, irregularities in transfer, etc. Will the Government initiate action in such cases ?

SRI M. Y. GHORPADE.— There are no two opinions that this situation where the Adyaksha loses his majority creates obvious administrative problems. It is not good for the development of Zilla Parishad itself. Now, the only thing is, though the

Government has got power to supersede Zilla Parishads, we would like to setright this position in a more fundamental way without using the power to supersede these bodies.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಮಂತ ಕಳೆದುಕೊಂಡ ಸರ್ಕಾರಗಳು ರಾಜ್ಯದಲ್ಲಾಗಲೀ ಕೇಂದ್ರದಲ್ಲಾಗಲೀ ಬಿದ್ದುಹೋಗುವ ಅಥವಾ ಕೆತ್ತು ಹಾಕುವಂತಹ ಕಾಲದಲ್ಲಿ ಸಿಂಪಲ್ ಮೆಜಾರಿಟಿ ಇರತಕ್ಕ ಜಿಲ್ಲಾಪರಿಷತ್‌ಗಳನ್ನು ಮೆಜಾರಿಟಿ ಇರತಕ್ಕ ಪಕ್ಷದವರಿಗೆ ಕೊಡುವುದಕ್ಕೆ ಇನ್ನೂ ಎಕ್ಸಾಮಿನ್ ಮಾಡುತ್ತಿದ್ದೇವೆದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ತತ್‌ಕ್ಷಣ ಆ ಕೆಲಸ ಮಾಡಬೇಕು. ರಾಜ್ಯದ ಮುಖ್ಯಮಂತ್ರಿಗಳನ್ನು ಮತ್ತು ಕೇಂದ್ರದ ಪ್ರಧಾನ ಮಂತ್ರಿಗಳನ್ನು ಒಂದು ಓಟು ಹೆಚ್ಚುಕಮ್ಮಿಯಾದರೆ ಅವಿಶ್ವಾಸ ನಿರ್ಣಯ ತಂದು ತೆಗೆಯುತಕ್ಕ ಶಕ್ತಿಯಿದೆ. ಅನೇಕ ಜಿಲ್ಲಾಪರಿಷತ್‌ಗಳು ತಮಗೆ ವಹಿಸಿರತಕ್ಕ ಕಾರ್ಯನಿರ್ವಹಣೆಯನ್ನು ಮಾಡದೆ ತಮ್ಮ ಜವಾಬ್ದಾರಿಯನ್ನು ಮಾಡದೆ, ದಿನನಿತ್ಯ ಬೇಕಾಗಿರುವ, ಕುಡಿಯುವ ನೀರು ಆಹಾರ ಧಾನ್ಯವಿತರಣೆ ಈ ಕೆಲಸ ಮಾಡದೆ ರಾಜಕೀಯ ಮಾಡಿಕೊಂಡಿದ್ದಾರೆ. ತಾವು ಅದನ್ನು ಎಕ್ಸಾಮಿನ್ ಮಾಡುತ್ತಿದ್ದೇವೆಂದು ಹೇಳುತ್ತೀರಿ. It is under active consideration of the Government. The Govt. is examining it. ಎಂದು ಹೇಳುತ್ತಿದ್ದೀರಿ, ಆರು ತಿಂಗಳ ಹಿಂದೆ ಚರ್ಚೆಗೆ ಉತ್ತರ ಕೊಡತಕ್ಕ ಸಂದರ್ಭದಲ್ಲಿ ಇದೇ ಉತ್ತರ ಬಂದಿದೆ.

SRI M. Y. GHORPADE.—Sir, let me repeat. I am in full agreement with the views expressed by the hon. Members Sri. Lakkappa and Sri Chikkegowda. ಈ ಸದನದಲ್ಲಿರತಕ್ಕವರೆಲ್ಲರೂ ಇದರಿಂದ ವಿನು ತೊಂದರೆಯಾಗುತ್ತಿದೆ ಎಂಬುದನ್ನು ಹೇಳಿದ್ದಾರೆ. ಅದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಸರ್ಕಾರ ಯಾವರೀತಿಯ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ಖಂಡಿತಾ ತೆಗೆದು ಕೊಳ್ಳುತ್ತದೆ. ಇರತಕ್ಕ ತೊಂದರೆಯನ್ನು ನಿವಾರಣೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆ.

[redacted] ಜಿಲ್ಲಾ ಪರಿಷತ್ತು ಹಾಗೂ ಮಂಡಲ ಪಂಚಾಯಿತಿಗಳಲ್ಲಿ ವೀಸಲಾತಿ

[redacted]ಳಿಗೆ, ಶ್ರೀ ಮಲ್ಲಿಕಾರ್ಜುನಖರ್ಗೆ (ಗುರುಮಿಠಕಲ್).—ಮಾನ್ಯ ಗ್ರಾಮಿಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹಿಂದಿನ ಸರ್ಕಾರವು ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್ ಕಾಯ್ದೆಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಜಿಲ್ಲಾಪರಿಷತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನ ಮತ್ತು ಮಂಡಲ ಪ್ರಧಾನ ಮತ್ತು ಉಪ ಪ್ರಧಾನರಿಗಲು ಅವಕಾಶ ಕಲ್ಪಿಸಲು ತಿದ್ದುಪಡಿ ಮಾಡಲು ಒಪ್ಪಿದೆಯೇ ?

ಆ) ಹಾಗಿದ್ದಲ್ಲಿ, ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್ ಕಾಯ್ದೆಗೆ ತಿದ್ದುಪಡಿ ಮಾಡಲು ತೆಗೆದುಕೊಂಡ ಕ್ರಮವೇನು ?

ಇ) ಜಿಲ್ಲಾಪರಿಷತ್‌ಗಳ ಮತ್ತು ಮಂಡಲ ಪಂಚಾಯತ್ ಕಾರ್ಯವಿಧಾನವನ್ನು ಉತ್ತಮಪಡಿಸಲು ಈಗಿರುವ ಜಿಲ್ಲಾಪರಿಷತ್ ಕಾಯ್ದೆಗೆ ಸರ್ಕಾರವು ತಿದ್ದುಪಡಿ ತರುತ್ತಿದೆಯೆ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಹೌದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ನನ್ನ ಮೊದಲನೆಯ ಪ್ರಶ್ನೆಗೆ 'ಇಲ್ಲ' ವೆಂದು ಉತ್ತರ ಕೊಟ್ಟಿದ್ದಾರೆ. ನನ್ನ ಎರಡನೆಯ ಪ್ರಶ್ನೆಗೆ 'ಉದ್ಭವಿಸುವುದಿಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಅದೇರೀತಿ ನನ್ನ ಮೂರನೆಯ ಪ್ರಶ್ನೆಗೆ 'ಹೌದು' ಎಂದು ಹೇಳಿದ್ದಾರೆ. ದುರ್ದೈವ ಏನಾಗಿದೆ ಅಂದರೆ ನಾನು ಆ ಕಡೆಗೆ ಇದ್ದಾಗ ಪ್ರಶ್ನೆ ಕೇಳಿದಾಗ,